ಬೆವಿಕಂ
BESCOM

# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಸಂಖ್ಯೆ: ಬೆವಿಕಂ/ನಿ(ಹ)/ಪ್ರವ್ಯ(ಕಂ)/ಬಿಸಿ-22/20-21//21-22 290-99
ವಿಳಾಸ:
ಲಗತ್ತು:

ಕಂಪನಿ ಕಾರ್ಯಾಲಯ
ಕೆ.ಆರ್. ವೃತ್ತ,
ಬೆಂಗಳೂರು-1

07 JUL 2021

**ಎಲ್ಲಾ ವಲಯದ ಮುಖ್ಯ ಇಂಜಿನಿಯರ್(ವಿ)**
**ಎಲ್ಲಾ ವೃತ್ತದ ಅಧೀಕ್ಷಕ ಇಂಜಿನಿಯರ್(ವಿ),**
**ಎಲ್ಲಾ ವಿಭಾಗೀಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ),**
**ಎಲ್ಲಾ ಉಪವಿಭಾಗಿಯ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),**
**ಬೆವಿಕಂ,**

**ಮಾನ್ಯರೇ,**

**ವಿಷಯ:** ಕರ್ನಾಟಕ ರಾಜ್ಯದಲ್ಲಿರುವ ಎಲ್ಲಾ ಲಾಭರಹಿತ ಮತ್ತು ಲಾಭದ ಉದ್ದೇಶದ ಸಾರ್ವಜನಿಕ ಪ್ರದರ್ಶನ ಸಂಸ್ಥೆಗಳ (ರಂಗಮಂದಿರಗಳು) ಪ್ರವರ್ಗದ ವಿದ್ಯುತ್ ಗ್ರಾಹಕರಿಗೆ ಪರಿಹಾರ ನೀಡುವ ಕುರಿತು.
**ಉಲ್ಲೇಖ:** ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಎನರ್ಜಿ 192 ಪಿಎಸ್‌ಆರ್ 2021 ಬೆಂಗಳೂರು, ದಿನಾಂಕ: 02.07.2021

*******

ಘನ ಕರ್ನಾಟಕ ಸರ್ಕಾರವು, ಕರ್ನಾಟಕ ರಾಜ್ಯದಲ್ಲಿನ ಲಾಭರಹಿತ ಮತ್ತು ಲಾಭದ ಉದ್ದೇಶದ ಸಾರ್ವಜನಿಕ ಪ್ರದರ್ಶನ ಸಂಸ್ಥೆಗಳ (ರಂಗಮಂದಿರಗಳು) ಪ್ರವರ್ಗಗಳ ವಿದ್ಯುತ್ ಗ್ರಾಹಕರಿಗೆ ಏಪ್ರಿಲ್ 2021 ರಿಂದ ಜುಲೈ 2021 ರ ಮಾಹೆಗಳ ವಿದ್ಯುತ್ ಬಿಲ್ಲಿನ ಬೇಡಿಕೆ / ನಿಗಧಿತ ಶುಲ್ಕಗಳನ್ನು ಪಾವತಿಸುವುದರಿಂದ ವಿನಾಯಿತಿಯನ್ನು ಘೋಷಣೆ ಮಾಡಿರುತ್ತದೆ. ಮಾಹಿತಿಗಾಗಿ ಪ್ರತಿಯನ್ನು ಲಗತ್ತಿಸಿದೆ.

ಅರ್ಹ ಗ್ರಾಹಕರಿಂದ ರಂಗಮಂದಿರಗಳೆಂದು ಸಂಬಂಧಪಟ್ಟ ಅಧಿಕೃತ ಪ್ರಾಧಿಕಾರದಿಂದ ಗುರುತಿಸಲ್ಪಟ್ಟು ಹಾಗೂ ಸದರಿ ಸಂಸ್ಥೆಗಳನ್ನು ಕರ್ನಾಟಕ ರಾಜ್ಯದಲ್ಲಿ ನಿರ್ವಹಿಸಲು ಆಧಾರವುಳ್ಳ ಪ್ರಮಾಣಪತ್ರ/ ಪರವಾನಗಿಯ ಪ್ರಮಾಣ ಪತ್ರದ ದೃಢೀಕೃತ ಪ್ರತಿಯನ್ನು ಪಡೆದು ಪರಿಶೀಲಿಸಿ ಸದರಿ ರಿಯಾಯಿತಿಯನ್ನು ತಂತ್ರಾಂಶದಲ್ಲಿ ಈಗಾಗಲೇ ರಚಿಸಿರುವ **"COVID-19: Waiveoff on Demand/Fixed Charges for Rangamandiras"** ಹೊಂದಾಣಿಕೆಯನ್ನು ಆಯ್ಕೆ ಮಾಡಿ ಮನ್ನಾ ಮಾಡಬೇಕಿರುವ ಬೇಡಿಕೆ/ನಿಗಧಿತ ಶುಲ್ಕ ಮೊತ್ತವನ್ನು ನಮೂದಿಸಿ ಹೊಂದಾಣಿಕೆ ನೀಡುವುದು.

ಮುಂದುವರೆದು, ಕರ್ನಾಟಕ ಸರ್ಕಾರ ನೀಡಿರುವ ಆದೇಶ ಮತ್ತು ಈಗಾಗಲೇ ನಿಗಮ ಕಾರ್ಯಾಲಯದ ಸುತ್ತೋಲೆ ಬೆವಿಕಂ/ನಿ(ಹ)/ಪ್ರವ್ಯ(ಕಂ)/ಬಿಸಿ-22/20-21//08 ದಿನಾಂಕ 10.08.2020 ರಲ್ಲಿ ನೀಡಿರುವ ಮಾರ್ಗದರ್ಶನಗಳನ್ನು ಪಾಲಿಸುವುದು. ಬೇಡಿಕೆ / ನಿಗಧಿತ ಶುಲ್ಕ ಹೊಂದಾಣಿಕೆ ಮಾಡಿರುವ ಮೊತ್ತವನ್ನು ಘನ ಸರ್ಕಾರದಿಂದ ಮರುಪಾವತಿ ಪಡೆಯಲು ಸಲ್ಲಿಸಬೇಕಿರುವುದರಿಂದ ಆಂತರಿಕ ಪರಿಶೋಧನೆ ಶಾಖೆಯಿಂದ ದೃಢೀಕರಿಸಿರುವ ವಿವರಗಳನ್ನು ಪ್ರತಿ ಮಾಹೆ 10 ನೇ ತಾರಿಖಿನೊಳಗೆ ನಿಗಮ ಕಾರ್ಯಾಲಯಕ್ಕೆ ಸಲ್ಲಿಸುವುದು. ತಪ್ಪಿದಲ್ಲಿ ಸಂಬಂಧಿಸಿದ ಅಧಿಕಾರಿಗಳ ಮೇಲೆ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುವುದು.

**ಡಾ॥ ಆರ್.ಸಿ. ಚೇತನ್ IRS**
**ನಿರ್ದೇಶಕರು (ಹಣಕಾಸು)**

**ಪ್ರತಿಗಳು ಮಾಹಿತಿಗಾಗಿ**

1. ಅಪರ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.

**ಪ್ರತಿ:**

1. ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ.ಪ) ಬೆವಿಕಂ, ನಿಗಮ ಕಾರ್ಯಾಲಯ ರವರ ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ.
2. ಪ್ರಧಾನ ವ್ಯವಸ್ಥಾಪಕರು (ಲೆ ಮತ್ತು ಜ) ಬೆವಿಕಂ, ನಿಗಮ ಕಾರ್ಯಾಲಯ ರವರ ಮಾಹಿತಿಗಾಗಿ ಹಾಗೂ ಲೆಕ್ಕೀಕರಿಸುವ ವಿಧಾನವನ್ನು ಕ್ಷೇತ್ರಾಧಿಕಾರಿಗಳಿಗೆ ಒದಗಿಸುವುದು.
3. ಎಲ್ಲಾ ವಿಭಾಗೀಯ ಲೆಕ್ಕಾಧಿರಿ(ಆಂ.ಪ) ಶಾಖೆ, ಬೆವಿಕಂ ರವರ ಸೂಕ್ತ ಕ್ರಮಕ್ಕಾಗಿ
3. ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ತಾಂತ್ರಿಕ) ಇವರ ಆಪ್ತ ಕಾರ್ಯದರ್ಶಿಗಳು ಬೆವಿಕಂ, ನಿಗಮ ಕಾರ್ಯಾಲಯ.
4. ಮಹಾಕಡತ/ಕಡತ

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: COVID-19 Lockdown ರಿಂದಾಗುವ ಪರಿಣಾಮಗಳನ್ನು ತಗ್ಗಿಸಲು ಕರ್ನಾಟಕ ರಾಜ್ಯದಲ್ಲಿರುವ ಎಲ್ಲಾ ಲಾಭರಹಿತ ಮತ್ತು ಲಾಭದ ಉದ್ದೇಶದ ಸಾರ್ವಜನಿಕ ಪ್ರದರ್ಶನ ಸಂಸ್ಥೆಗಳ (ರಂಗಮಂದಿರಗಳು) ಪ್ರವರ್ಗದ ವಿದ್ಯುತ್ ಗ್ರಾಹಕರಿಗೆ ಪರಿಹಾರ ನೀಡುವ ಕುರಿತು.

ಓದಲಾಗಿದೆ: ಸರ್ಕಾರದ ಆದೇಶ ಸಂಖ್ಯೆ: ಎನರ್ಜಿ 187 ಪಿಎಸ್ಆರ್ 2021, ದಿನಾಂಕ: 21.06.2021.

ಪ್ರಸ್ತಾವನೆ:-

ರಾಜ್ಯದಲ್ಲಿ ಎರಡನೇ ಅಲೆಯ COVID-19 ಸಾಂಕ್ರಾಮಿಕ ರೋಗ ಹರಡುವುದನ್ನು ನಿಯಂತ್ರಿಸಲು 29.04.2021 ರಿಂದ Lockdown ಜಾರಿಗೆ ತರಲಾಯಿತು ಮತ್ತು ಅದನ್ನು ಕಾಲಕಾಲಕ್ಕೆ ವಿಸ್ತರಿಸಲಾಯಿತು. COVID-19 ಸಾಂಕ್ರಾಮಿಕ ರೋಗದ ಹರಡುವಿಕೆಯನ್ನು ನಿಯಂತ್ರಿಸಲು ಸಾರ್ವಜನಿಕರ ಚಲನ ಮತ್ತು ಕಛೇರಿ ಸಂಸ್ಥೆಗಳ ತೆರೆಯುವಿಕೆ ಇತ್ಯಾದಿಗಳಿಗೆ ರಾಜ್ಯ ಸರ್ಕಾರವು ಹಲವಾರು ನಿರ್ಬಂಧನೆಗಳನ್ನು ವಿಧಿಸಿದೆ. ಈ ಬಿಕ್ಕಟ್ಟಿನ ಸಮಯದಲ್ಲಿ ಹಾಗೂ ಈ ಅಭೂತಪೂರ್ವ ಪರಿಸ್ಥಿತಿಯು ಇನ್ನೂ ಸ್ವಲ್ಪ ಸಮಯದವರೆಗೆ ಮುಂದುವರೆಯುವ ಸಾಧ್ಯತೆ ಇರುವುದರಿಂದ ವಿದ್ಯುತ್ ಗ್ರಾಹಕರು ತಮ್ಮ ವಿದ್ಯುತ್ ಬಿಲ್ ಮೊತ್ತವನ್ನು ಸಮಯಕ್ಕೆ ಸರಿಯಾಗಿ ವಿದ್ಯುತ್ ಸರಬರಾಜು ಕಂಪನಿಗಳಿಗೆ ಪಾವತಿಸುವುದು ಕಷ್ಟಕರವಾಗಿದೆ ಎಂದು ತಿಳಿದು ಬಂದಿದೆ.

COVID-19 Lockdown ರಿಂದಾಗುವ ಪರಿಣಾಮಗಳನ್ನು ತಗ್ಗಿಸುವ ಸಲುವಾಗಿ, ಕರ್ನಾಟಕ ಸರ್ಕಾರವು ಮೇಲೆ ಓದಲಾದ ಸರ್ಕಾರದ ಆದೇಶ ಸಂಖ್ಯೆ: ಎನರ್ಜಿ 187 ಪಿಎಸ್ಆರ್ 2021, ದಿನಾಂಕ 21.06.2021ರಲ್ಲಿ MSME ಮತ್ತು Non MSME ವರ್ಗದ ವಿದ್ಯುತ್ ಗ್ರಾಹಕರುಗಳಿಗೆ ಕೆಲವು ಪರಿಹಾರ / ಪ್ರೋತ್ಸಾಹಗಳನ್ನು ಈಗಾಗಲೆ ನೀಡಲಾಗಿದೆ.

ಮುಂದುವರೆದು, ಕರ್ನಾಟಕ ರಾಜ್ಯದಲ್ಲಿರುವ ಎಲ್ಲಾ ಲಾಭರಹಿತ ಮತ್ತು ಲಾಭದ ಉದ್ದೇಶದ ಸಾರ್ವಜನಿಕ ಪ್ರದರ್ಶನ ಸಂಸ್ಥೆಗಳ (ರಂಗಮಂದಿರಗಳು) ಈ ಪ್ರವರ್ಗಗಳ ವಿದ್ಯುತ್ ಗ್ರಾಹಕರಿಗೆ ಏಪ್ರಿಲ್ 2021 ರಿಂದ ಜುಲೈ 2021ರ ಮಾಹೆಗಳ ವಿದ್ಯುತ್ ಬಿಲ್ಲಿನ ಬೇಡಿಕೆ / ನಿಗದಿತ ಶುಲ್ಕಗಳನ್ನು ಪಾವತಿಸುವುದರಿಂದ ವಿನಾಯಿತಿಯನ್ನು ನೀಡಲು ಸರ್ಕಾರವು ನಿರ್ಧರಿಸಿರುವುದರಿಂದ, ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಎನರ್ಜಿ 192 ಪಿಎಸ್‌ಆರ್ 2021

ಬೆಂಗಳೂರು, ದಿನಾಂಕ: 02.07.2021.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯದಲ್ಲಿನ ಎಲ್ಲಾ ಲಾಭರಹಿತ ಮತ್ತು ಲಾಭದ ಉದ್ದೇಶದ ಸಾರ್ವಜನಿಕ ಪ್ರದರ್ಶನ ಸಂಸ್ಥೆಗಳು / ರಂಗ ಮಂದಿರಗಳೆಂದು ಸಂಬಂಧಪಟ್ಟ ಅಧಿಕೃತ ಪ್ರಾಧಿಕಾರದಿಂದ ಗುರುತಿಸಲ್ಪಟ್ಟು ಹಾಗೂ ಸದರಿ ಸಂಸ್ಥೆಗಳನ್ನು ಕರ್ನಾಟಕ ರಾಜ್ಯದಲ್ಲಿ ನಡೆಸಲು ಆಧಾರವುಳ್ಳ ಪ್ರಮಾಣ ಪತ್ರ / ಪರವಾನಿಗೆಯನ್ನು ಹೊಂದಿರುವ ಈ ಪ್ರವರ್ಗದ ಎಲ್ಲಾ ವಿದ್ಯುತ್ ಗ್ರಾಹಕರಿಗೆ ಈ ಕೆಳಕಂಡ ಪರಿಹಾರವನ್ನು ನೀಡಲು ಸರ್ಕಾರವು ನಿರ್ಧರಿಸಿ ಆದೇಶಿಸಿದೆ.

**"ಏಪ್ರಿಲ್ 2021 ರಿಂದ ಜುಲೈ 2021ರ ಮಾಹೆಗಳವರೆಗಿನ ವಿದ್ಯುತ್ ಬಿಲ್ಲಿನ ಬೇಡಿಕೆ / ನಿಗದಿತ ಶುಲ್ಕಗಳನ್ನು ಪಾವತಿಸುವುದರಿಂದ ವಿನಾಯಿತಿ ನೀಡಲಾಗಿದೆ."**

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ ಎಫ್‌ಡಿ 237 ವೆಚ್ಚ-1/2021 ದಿನಾಂಕ: 28.06.2021ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

N. mangalagowri 2/7/21
(ಎನ್.ಮಂಗಳಗೌರಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಇವರಿಗೆ:-

ಸಂಕಲನಕಾರರು, ರಾಜ್ಯಪತ್ರ, ಬೆಂಗಳೂರು ಪ್ರಕಟಣೆಗಾಗಿ.

ಪ್ರತಿ:-

1. ವ್ಯವಸ್ಥಾಪಕ ನಿರ್ದೇಶಕರು, ಬೆವಿಕಂ, ಮವಿಕಂ, ಹುವಿಕಂ, ಗುವಿಕಂ ಮತ್ತು ಚಾವಿಸನಿನಿ.
2. ಭಾರತ ಸರ್ಕಾರದ ಇಂಧನ ಮಂತ್ರಾಲಯರವರ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿರವರು, ಶ್ರಮ ಶಕ್ತಿ ಭವನ, ರಫಿ ಮಾರ್ಗ್, ನವದೆಹಲಿ.
3. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.

4. ಮಾನ್ಯ ಮುಖ್ಯ ಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
7. ಕಾರ್ಯದರ್ಶಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, #16, ಸಿ-1, ಮಿಲ್ಲರ್ಸ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು-52.
8. ವ್ಯವಸ್ಥಾಪಕ ನಿರ್ದೇಶಕರ ಆಪ್ತ ಕಾರ್ಯದರ್ಶಿ, ಕವಿಪ್ರನಿನಿ/ಕವಿನಿನಿ/ಪಿಸಿಕೆಎಲ್/ಕ್ರೆಡಲ್.
9. ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
10. ಶಾಖಾರಕ್ಷಾ ಕಡತ / ಹೆಚ್ಚುವರಿ ಪ್ರತಿ.